ಮಂಗಳಂ॥ಪ॥ ಗೋಕುಲದೊಳಾಡುತಿಹ ಶ್ರೀಕರದ ಶ್ರೀಪಾದ। ವ್ಯಾಕುಲವ ಪರಿಹರಿಸಿ ಪೊರೆವ ಪಾದ। ಜೋಕೆಯಲಿ ಕಡಹದಾ ವೃಕ್ಷವೇರಿದ ಪಾದ। ಭೀಕರದ ಫಣಿಶಿರದಿ ತಾ ಕುಣಿದ ಶ್ರೀಪಾದ॥1॥ ಚಲನವಿಲ್ಲದೆ ಇಳೆಯನೆಳೆದು ತೋರಿದ ಪಾದ। ಬಲಿಯ ಭಕುತಿಗೆ ಮೆಚ್ಚಿ ತುಳಿದ ಪಾದ। ಶಿಲೆಗೆ ಸೋಕಲು ಕನ್ಯಾ ಮಣಿಯನು ಗೈಸಿದ ಪಾದ॥ ಇಳೆಗೆ ಕೌರವನ ಪೀಠವನು ಉರುಳಿಸಿದ ಶ್ರೀಪಾದ॥2॥ ಸಾಗರಾತ್ಮಜೆ ತರದಿ ಪಿಡಿದು ಒತ್ತಿದ ಪಾದ। ನಗರದಾ ಸೇತುವೆಗೆ ಭೋಗವಿತ್ತ ಪಾದ। ನಾಗಶಯನದೊಳಿರುತ ನಲಿದು ನೀಡಿದ ಪಾದ। ಜಗನಗರದೊಳ್ ವಿದುರನಾಲಯದೊಳಿದ್ದ ಶ್ರೀಪಾದ॥3॥ ಕರದಿ ವಾಜಿಯ ಪಿಡಿದು ರಥ ವಿರಾಜಿಪ ಪಾದ। ಕರದಿ ಚಕ್ರದಿ ಭೀಷ್ಮನೆರಗಿದಪಾದ। ತರಣಿ ತನಯನ ಶಿರಕೆ ತೇರನೊತ್ತಿದ ಪಾದ। ತರುಣಿ ದ್ರೌಪದಿ ಬಿಡದೆ ಧ್ಯಾನಿಸುವ ಶ್ರೀಪಾದ॥4॥ ಗರುಡ ಗಂಧರ್ವರು ಬಿಡದೆ ಧ್ಯಾನಿಪ ಪಾದ। ಭರದಿ ಶಕಟಾಸುರನ ಒಡೆದ ಪಾದ। ಕಲಿ ಸುಯೋಧನನ ಓಲಗದಿ ಕೆಡಹಿದ ಪಾದ। ಬಿಡದೆ ಶ್ರೀಲಕ್ಷ್ಮಿಯು ಒತ್ತುತಿಹ ಶ್ರೀ ಪಾದ॥5॥ ಭಾಗವತರನ್ನು ದಿನದಿ ಪಾಡಿ ಪೊಗಳುವ ಪಾದ। ಬೇಗದಲಿ ಪವನಜನ ಮೇಲಿತ್ತ ಪಾದ। ವೇಗದಲಿ ಸಂಚರಿಪ ಗರುಡನೇರಿದ ಪಾದ। ಭಾಗೀರಥಿಯನೂ ಪಡೆದ ಪಾವನವುಳ್ಳ ಶ್ರೀಪಾದ॥6॥ ತ್ರಿಜಗವಾಸಿಗಳೆಲ್ಲ ಭಜಿಸಿ ನಮಿಸುವ ಪಾದ। ವಿಜಯ ಸೋಮನಪುರ ದೊಳರ್ಚಿಸುವ ಪಾದ। ನಿಜದಿ ಗೋಕರ್ಣಗರ ರಮಣಿ ಗೈಸಿದ ಪಾದ। ಭಜನೆ ಮಾಳ್ಪರೆ ಮೋಕ್ಷ ನರಹರಿಯ ಶ್ರೀಪಾದ॥7॥

**ಜಯ ಜಾನಕೀರಮಣ** **ರಾಗ: ನಾಟಿ, ಝಂಪೆತಾಳ**

ಜಯ ಜಾನಕೀರಮಣ ಜಯ ವಿಭೀಷಣ ಶರಣ। ಜಯ ಸರೋರುಹ ಚರಣ ಜಯ ದೀನ ಕರುಣ॥ಜಯ॥ ಜಯ ಲೋಕ ಶರಣ್ಯ ಜಯ ಭಕ್ತ ಕಾರುಣ್ಯ। ಜಯ ದಿವ್ಯ ಲಾವಣ್ಯ ಜಯ ಜಗತ್ಪುಣ್ಯ॥ಜಯ॥ ಸಕಲ ಲೋಕವಾಸ ಸಾಕೇತ ಪುರವಾಸ। ಅಕಳಂಕ ನಿಜದಾಸ ಅಬ್ಜಮುಖಹಾಸ॥ಜಯ॥ ಶುಕಮುನಿ ಸ್ತುತಿಪಾತ್ರ ಶುಭದ ನಿಜ ಚಾರಿತ್ರ। ಮಕರ ಕುಂಡಲ ಕರ್ಣ ಮೇಘ ಸಮವರ್ಣ॥ಜಯ॥ ಕಮನೀಯ ಕುಟೀರ ಕೌಸ್ತುಭಾಲಂಕಾರ। ಕಮಲಾಕ್ಷ ರಘುವೀರ ಕಮಲಾವಿಹಾರ॥ಜಯ॥ ಸಮರರಿಪು ಜಯಧೀರ ಸಕಲಗುಣ ಗಂಭೀರ। ಅಮರ ಹೃತ್ಸಂಚಾರ ಅಖಿಲಾರ್ತಿ ಹರ॥ಜಯ॥ ರೂಪ ನಿಂದಿತಮಾರ ರುಚಿರ ಸದ್ಗುಣ ಶೂರ। ಭೂಪ ದಶರಥ ಕುಮಾರ ಭೂಭಾರಹರ॥ಜಯ॥ ಪಾಪ ಸಂಘವಿದಾರ ಪಂಕ್ತಿಮುಖ ಸಂಹಾರ। ಶ್ರೀಪತೇ ಸುಕುಮಾರ ಸೀತಾ ವಿಹಾರ॥ಜಯ॥

# ಮನಸ್ಸು ಸ್ತುತಿ

## ದೇವರನಾಮ

**ಅನುಗಾಲವು ಚಿಂತೆ ಜೀವಕೆ** **ರಾಗ: ಕಾಪಿ, ಆದಿತಾಳ**

ಅನುಗಾಲವು ಚಿಂತೆ ಜೀವಕೆ, ತನ್ನ ಮನವು ಶ್ರೀರಂಗನೊಳ್ ಮೆಚ್ಚುವ ತನಕ॥ಪ॥ ಸತಿಯು ಇದ್ದರು ಚಿಂತೆ, ಸತಿಯು ಇಲ್ಲದ ಚಿಂತೆ। ಮತಿಹೀನೆ ಸತಿಯಾದರು ಚಿಂತೆಯು। ಪೃಥ್ವಿಯೊಳಗೆ ಸತಿ ಅತಿ ಚೆಲ್ವೆಯಾದರೆ। ಮಿತಿ ಮೇರೆಯಿಲ್ಲದ ಮೋಹದ ಚಿಂತೆ॥1॥ ಪುತ್ರರಿದ್ದರು ಚಿಂತೆ ಪುತ್ರರಿಲ್ಲದ ಚಿಂತೆ। ಅತ್ತು ಅನ್ನಕೆ ಕಾಡುವ ಚಿಂತೆಯು। ತುತ್ತಿನ ಆಸೆಗೆ ತುರುಗಳ ಕಾಯ್ದರು। ಸುತ್ತೇಳು ಕಡೆಯಿಲ್ಲದ ಚಿಂತೆಯು॥2॥ ಬಡವನಾದರು ಚಿಂತೆ ಬಲ್ಲಿದನಾದರು ಚಿಂತೆ। ಹಿಡಿ ಹೊನ್ನು ಕೈಯೊಳಿದ್ದರು ಚಿಂತೆಯು। ಪೊಡವಿಯೊಳಗೆ ಸಿರಿ ಪುರಂದರವಿಠಲನ। ಬಿಡದೆ ಚಿಂತಿಸಿದರೆ ಚಿಂತೆ ನಿಶ್ಚಿಂತೆ॥3॥

**ಈ ದೇಹ ಗಾಳಿದೀಪ** **ರಾಗ: ಪೂರ್ವಿಕಲ್ಯಾಣಿ**

ಈ ದೇಹ ಗಾಳಿದೀಪ। ಎಲೆ ಮನವೆ।।ಪ।। ಎಚ್ಚರ ಎಚ್ಚರ ಎಚ್ಚರ। ನಳ ಪುರೂರವ ಹರಿಶ್ಚಂದ್ರ ಪುಣ್ಯ ಶ್ಲೋಕರು। ಇಳೆಯೊಳು ಇಲ್ಲಾದರಯ್ಯಾ।।1।। ಹಂಬಲದ ಕಡಲೊಳು ಮುಳುಗಲು ಇನ್ಯಾವಸುಖ। ಅಂಬುಜಾಕ್ಷಗೆ ಸೇರಲಿ ಈ ಲೆಕ್ಕ।।2।। ಧರ್ಮವ… ಹಳಿದು। ಸತ್ಕರ್ಮವ ಜರಿದರೆ। ನಮ್ಮ ಪ್ರಸನ್ನ ವೆಂಕಟೇಶ ಬಲು ದೂರಮ್ಮ।।3।।

**ಎನ್ನ ಮನದ ಡೊಂಕ ತಿದ್ದಿಸೊ** **ರಾಗ: ಮೋಹನ, ಆದಿತಾಳ**

ಎನ್ನ ಮನದ ಡೊಂಕ ತಿದ್ದಿಸೊ ಹೇ ಶ್ರೀನಿವಾಸ।।ಪ।। ಇನ್ನು ಸಂಶಯವೇಕೆ ನಿನ್ನ ಚರಣದಲ್ಲಿ ಸೇರಿಸೊ।।ಅ.ಪ.।। ಉದಯವಾದರೆ ಊಟದ ಚಿಂತೆ ಆದರ ಮೇಲೆ ಭೋಗದ ಚಿಂತೆ ಹದಿನಾಲ್ಕು ಲೋಕವಾಳಬೇಕೆಂಬ ಚಿಂತೆ। ಇದು ಪುಣ್ಯ ಇದು ಪಾಪವೆಂದು ಹೃದಯದಲಿ ಭಯವಿಲ್ಲದೆ ಮದನಮೋಹನ ನಿನ್ನ ಪಾದವನಂಬಿದೆ ದೀನದಯಾಳೋ।।1।। ನೆರೆಮನೆಯ ಭಾಗ್ಯ ನೋಡಿ ಸೈರಿಸಲಾರದಸೂಯನಾಗಿ ಹರಿಸ್ಮರಣೆಗೆ ವಿಮುಖನಾದೆ ನರರ ಸ್ತುತಿಯ ಮಾಡಿದೆ। ಪರರ ಸತಿಗೆ ಪರರ ಅನ್ನಕೆ ತಿರುಗಿ ತಿರುಗಿ ಚಪಲನಾದೆ ಗುರು ಹಿರಿಯರ ದೂಷಿಸಿ ಮರುಳಾದೆ ದೀನಶರಣ್ಯ।।2।। ಅಗಣಿತ ಸುಖ ಬಂದರೆ ಧನಿಕ ನಾನೆಂಬೆ ಮಿಗೆ ಹಾನಿಗೆ ಹರಿಯ ದೂಷಿಸಿ ನೆಗೆದು ಪತಂಗ। ಕಿಚ್ಚಲಿ ಬೀಳುವ ಬಗೆಯಾದೆನು ಪುರಂದರವಿಠಲ ಖಗರಾಜಸುವಾಹನ।।3।।

**ಎಲೆಮನ ಮುರಾರಿಯನು ಕೊಂಡಾಡೊ** **ರಾಗ: ಹಂಸಾನಂದಿ, ಆದಿತಾಳ**

ಎಲೆಮನ ಮುರಾರಿಯನು ಕೊಂಡಾಡೊ।।ಪ।। ಕಾಲನ ದೂತರ ಕಾಲಿಗೆ ಬಿದ್ದರೆ ನಾಳೆಗೆ ನಿಲುವರೆ ಏನೋ ಮೂಢ।।ಅ.ಪ।। ಮಂದಿಯ ಮಾತಿಗೆ ಮರುಗದೆ ಮುಂದಿನ ಗತಿಯ ನೀ ನೋಡೋ।।1।। ರಾಜೀವಮುಖಿಯರ ಮೋಜಿಗೆ ಮೆಚ್ಚದೆ ವಿಜಯವಿಠಲನ ಪಾಡೊ।।2।।

**ಏನು ಹೇಳಲಿ ನರಹರಿ ನಿನ್ನ ಮಹಿಮೆಯ** **ರಾಗ: ರೀತಿಗೌಳ, ಛಾಪುತಾಳ**

ಏನು ಹೇಳಲಿ ನರಹರಿ ನಿನ್ನ ಮಹಿಮೆಯ।।ಪ।। ನಿನ್ನ ಧ್ಯಾನ ಮಾಡೇನೆಂದರೆ ನಿಲ್ಲಗೊಡದು ಮನ।।ಅ.ಪ।। ಸಚ್ಚಿದಾನಂದನ ಪಾದಾರವಿಂದವ। ಮೆಚ್ಚಿ ಹಸನಾಗು ಇರು ಎಂದೊಡೆ ಮನ। ಹುಚ್ಚೆದ್ದ ಕಪಿಯಂತೆ ವಿಷಯವೆಂಬಡವಿಲಿ। ಕಿಚ್ಚು ಕಂಗೊಂಡು ಎನ್ನ ಕಾಡುತಿದೆ ರಂಗ।।1।। ವಾಸುದೇವನ ಗುಣಗಳ ಸ್ತುತಿಸದೆ। ದುರಾಸೆಯೊಳು ಬಿದ್ದು ಕಾಡುತಿದೆ ಮನ।। ಲೇಸಾಗಿ ನಾಯಿಬಾಲಕೆ ನಾರಾಯಣತೈಲ। ಏಸುಬಾರಿ ತೀಡಿದರೆ ನೀಟಾಗುವುದೋ।।2।। ಸಾಧು ಸಜ್ಜನರ ಸಂಗವ ಮಾಡಲೊಲ್ಲದೆ। ಬಾಧಿಸುತಿದೆ ದುಷ್ಟ ಸಂಗದಿಂದ ಮನ। ಮಾಧವ ಭಕ್ತವತ್ಸಲ ಹಯವದನನೆ ನೀ ದಯಮಾಡಿ ನಿನ್ನಂತೆ ಮಾಡೆನ್ನ ಮನ।।3।।

**ಅಂತಕನ ದೂತರಿಗೆ ಕಿಂಚಿತ್ತು** **ರಾಗ: ಭಾಗೇಶ್ರೀ, ಖಂಡಛಾಪುತಾಳ**

ಅಂತಕನ ದೂತರಿಗೆ ಕಿಂಚಿತ್ತು ದಯವಿಲ್ಲ। ಚಿಂತೆಯನು ಬಿಟ್ಟು ಶ್ರೀಹರಿಯ ನೆನೆ ಮನವೆ।।ಪ।। ದಿವ ರಾತ್ರೆಯೆನ್ನದೆ ವಿಷಯಲಂಪಟನಾಗಿ। ಸವಿಯೂಟಗಳನುಂಡು ಭ್ರಮಿಸಬೇಡ। ಅವನ ಕೊಂದಿವನ ಕೊಂದರ್ಥವನು ಗಳಿಸುವೊಡೆ। ಜವನದೂತರು ಬರುವ ಹೊತ್ತ ನೀನರಿಯೆ।।1।। ಮೊನ್ನೆ ಮದುವೆಯಾದೆ ಕರೆವುದೊಂದೆರಡೆಮ್ಮೆ। ನೆನ್ನೆ ಕೊಂಡೆನು ಕ್ಷೇತ್ರ ಫಲವು ಬಹುದು। ಹೊನ್ನು ಹಣವುಂಟೆನಗೆ ಸಾಯಲಾರೆನು ಎನಲು। ಬೆನ್ನು ಬಿಡುವಳೆ ಮೃತ್ಯು ವ್ಯರ್ಥ ಜೀವಾತ್ಮಾ।।2।। ಹೊಸಮನೆಯ ಕಟ್ಟಿದೆನು ಗೃಹಶಾಂತಿ ಮನೆಯೊಳಗೆ। ಬಸುರಿ ಹೆಂಡತಿ ಮಗನ ಮದುವೆ ನಾಳೆ। ಹಸನಾಗಿ ಇದೆ ಬದುಕು ಸಾಯಲಾರೆನು ಎನಲು। ಕೊಸರಿದರಿಯದೆ ಬಿಡರು ಯಮನವರು ಆಗ।।3।। ಪುತ್ರ ಹುಟ್ಟಿದ ದಿವಸ ಹಾಲು ಊಟದ ಹಬ್ಬ। ಮತ್ತೊಬ್ಬ ಮಗನ ಉಪನಯನ ನಾಳೆ। ಅರ್ತಿಯಾಗಿದೆ ಬದುಕು ಸಾಯಲಾರೆನು ಎನಲು। ಮೃತ್ಯು ಹೆಡೆತಲೆಯಲ್ಲಿ ನಗುತಿರ್ಪುದರಿಯೆ।।4।। ಅಟ್ಟಡಿಗೆಯನುಣಲಿಲ್ಲ ಇಷ್ಟ ದರುಶನವಿಲ್ಲ। ಕೊಟ್ಟ

ಸಾಲವ ಕೇಳ್ವ ಹೊತ್ತನರಿಯೆ। ಕಟ್ಟಲೆ ತುಂಬಿದಮೇಲೆ ಕ್ಷಣಮಾತ್ರ ಇರಲಿಲ್ಲ। ಅಷ್ಟರೊಳು ಪುರಂದರವಿಠಲನೆನು ಮನವೆ॥5॥

**ತಲ್ಲಣಿಸದಿರು ಕಂಡ್ಯ ತಾಳುಮನವೆ** **ರಾಗ: ಹಿಂದೋಳ, ಖಂಡಛಾಪುತಾಳ**

ತಲ್ಲಣಿಸದಿರು ಕಂಡ್ಯ ತಾಳುಮನವೆ॥ಪ॥ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ॥ಅ.ಪ॥ ಬೆಟ್ಟದಾ ತುದಿಯಲ್ಲಿ ಹುಟ್ಟಿರುವ ವೃಕ್ಷಕ್ಕೆ ಕಟ್ಟೆಯನು ಕಟ್ಟಿ ನೀರೆರೆದವರು ಯಾರೋ। ಪುಟ್ಟಿಸಿದ ದೇವತಾ ಹೊಣೆಗಾರನಾದಮೇಲೆ ಗಟ್ಯಾಗಿ ಸಲಹುವನು ಇದಕೆ ಸಂಶಯವಿಲ್ಲ॥1॥ ಅಡವಿಯೊಳಗಾಡುವ ಮೃಗ ಪಕ್ಷಿಗಳಿಗೆಲ್ಲ ಅಡಿಗಡಿಗೆ ಆಹಾರವಿತ್ತವರು ಯಾರೋ। ಹಡೆದ ಜನನಿಯತೆರದಿ ಸ್ವಾಮಿ ಹೊಣೆಗೀಡಾಗಿ ಬಿಡದೆ ರಕ್ಷಿಪನಿದಕೆ ಸಂದೇಹ ಬೇಡ॥2॥ ಕಲ್ಲಿನಲಿ ಹುಟ್ಟಿ ತಾ ಕೂಗುವ ಕಪ್ಪೆಗೆ ಅಲ್ಲಿ ಆಹಾರವನು ಇತ್ತವರು ಯಾರೋ। ಬಲ್ಲಿದನು ಕಾಗಿನೆಲೆಯಾದಿಕೇಶವರಾಯ ಎಲ್ಲರನು ಸಲಹುವನು ಇದಕೆ ಸಂಶಯವಿಲ್ಲ॥3॥

**ನೆನೆ ಮನ ಅನುದಿನದಿ**

ನೆನೆ ಮನ ಅನುದಿನದಿ। ಅನು ಮಾನಿಸದೆ॥ಪ॥ ನೆನೆ ಮನವೆ ಶ್ರೀ ಸತ್ಯಾಧ್ಯಾನರ। ಅನಘ ಹೃದ್ವನಜದಲಿ ಘನ। ದಿನಮಣಿಯ ಪೋಲ್ ಮಿನುಗುವ ಗುಣಗಣ। ತನುಮರೆದು ಕುಣುಕುಣಿದು ಹರುಷದಿ॥ಅ.ಪ.॥ ಜ್ಞಾನಾತ್ಮ ಪರನೆಂದು। ಮಿಕ್ಕಾದಿತೇಯರು। ಊನರು ಹರಿಗೆಂದು ಚೇತನರು ಇವನಾಧೀನರು ಅಹುದೆಂದು। ವಿಸ್ತರಿಸಿ ಪೇಳಿದ॥ ದೀನಪಾಲಕ ದೇವಶ್ರೀ ಘವ। ಮಾನ ಮತ ಅಂಬುಧಿಯೊಳನುಧಿನ। ಮೀನನೆನಿಸಿದ ನಮ್ಮ ಸತ್ಯ ಜ್ಞಾನತೀರ್ಥರಮಾನದಾಂಘ್ರಿಯ॥1॥ ಕಮಲಾಪ್ತಗಧಿಕವಾದ। ತೇಜದಲಿ ಪೊಳೆಯುವ। ಕಮಲಾ ಪತೀಯ ಸುಪಾದ ಅತಿ ವಿಮಲ ತನ್ ಹೃತ್ ಕಮಲದೊಳಿಟ್ಟು ಸದಾ ಸೇವಿಸುತ ಅಭಯಕರ ಕಮಲಮುಖ॥ ಕಮಲ ಚಂದಿರ ನೆನಿಸಿ ಸಜ್ಜನ। ಕಮಲ ಮಹಿಮೆಯ ತೋರ್ದಗುರು ಕಮ। ಕಮಲ ಸಂಭವ ಪಿತನ ಪೋತನ॥2॥ ಇಂದ್ರ ಲೋಕವ ತೊರೆದು। ಕೆಲಕಾಲ ತಾರಾ। ಕೇಂದ್ರನೋಲ್ ಭುವಿಗಿಳಿದು। ಸಜ್ಜನರ ಪೊರೆವದ। ಕೇಂದ್ರಿಯಂಗಳ ಗೆಲಿದು। ಸನ್ಯಾಸಗೊಂಡು ಇಂದ್ರ ಹರಿಹರ ಇನ ರಘುಕುಲ। ಇಂದ್ರನಾದ ಉಪೇಂದ್ರ ಸಿರಿ ಗೋವಿಂದ ವಿಠಲನ ಭಜಿಸಿ ರಾಜ ಮಹೇಂದ್ರಿಯೊಳ್ ತನುವಿಟ್ಟ ಗುರುಪದ॥3॥

**ಮನಸು ನಿಲಿಸುವುದು ಬಹಳ ಕಷ್ಟ** **ರಾಗ: ಕೇದಾರಗೌಳ, ಝಂಪೆತಾಳ**

ಮನಸು ನಿಲಿಸುವುದು ಬಹಳ ಕಷ್ಟ॥ಪ॥ ಗುಣಿಸುವುದು ನಿಮ್ಮೊಳಗೆ ನೀವೇ ನೆಲೆ ಬಲ್ಲವರು॥ಅ.ಪ॥ ಮುರಿ ದೋಡಿ ಬರುವ ರಣರಂಗ ನಿಲಿಸಬಹುದು ಹರಿವ ನದಿಗಳನು ತಿರುಗಿಸಲುಬಹುದು। ಕರಿಸೊಕ್ಕಿ ಬರುತಿರಲು ತಡೆದು ನಿಲಿಸಬಹುದು ಮರುಳುಮನ ನಿಲಿಸುವುದು ಸುರರಿಗಳವಲ್ಲ॥1॥ ಭೈರವನ ದಾಡೆಯನು ಹಿಡಿದು ನಿಲಿಸಬಹುದು ಮಾರುತನ ಉರುಬೆಯನು ನಿಲ್ಲಿಸಬಹುದು। ಮಾರಿಗಳ ಮುಂಜೆರಗ ತುಡುಕಿ ನಿಲ್ಲಿಸಬಹುದು ಹಾರಿಹಾರುವ ಮನಸು ನಿಲಿಸಳಲವಲ್ಲ॥2॥ ಶರಧಿಗಳ ಭೋರ್ಗರೆವ ಧ್ವನಿಯ ನಿಲಿಸಲುಬಹುದು ಸುರಿವ ಬಿರುಮಳೆಯನ್ನು ನಿಲ್ಲಿಸಬಹುದು। ಹರಿದೋಡುವ ಮನಸು ನಿಲಿಸಲಾರಳವಲ್ಲ ಸಿರಿಯರಸ ವಿಜಯವಿಠ್ಠಲ ತಾನೆ ಬಲ್ಲ ॥

**ಮನಸು ಕರಗದೇ ಸ್ವಾಮಿ** **ರಾಗ: ಕಾನಡ, ರೂಪಕತಾಳ**

ಮನಸು ಕರಗದೇ ಸ್ವಾಮಿ ದಯವು ಬಾರದೆ॥ಪ॥ ದೀನನಾಗಿ ನಿನ್ನ ಪಾದವನ್ನು ನಂಬಿದೆನೋ ಸ್ವಾಮಿ॥ಅ.ಪ॥ ಒಡಲಿಗೋಸುಗವಾಗಿ ಪರರ ಅಡಿಗಳಿಗೆ ನಮಿಸಿ ಅವರ। ಬಿರುನುಡಿಗಳ ಕೇಳಲಾರೆ ಪೇಳಲಾರೇ ಹರೇ ಮುರಾರೆ॥1॥ ಜನನಿ ಜನಕ ನೀನೆ ಎಂದು ನಿನ್ನ ನಂಬಿದೆ ದೀನಬಂಧು। ಎನ್ನ ಪಾಲಿಸೋ ಬೇಗ ಬಂದು ಮನ್ನಿಸೈಯ್ಯ ಕೃಪಾಸಿಂಧು॥2॥ ದಿನವು ಕಳೆದು ಹೋಯಿತಲ್ಲ ಪ್ರಾಣೇಶ ವಿಠಲ ಬಲ್ಲ। ಮನ್ನಿಸುವರೊಬ್ಬರಿಲ್ಲ ಕಾಯೋ ಬಾಲ ಗೋಪಾಲ ॥3॥

**ಮನವ ನಿಲಿಸುವುದು ಬಹು ಕಷ್ಟ** **ರಾಗ: ನಾದನಾಮಕ್ರಿಯೆ, ಆದಿತಾಳ**

ಮನವ ನಿಲಿಸುವುದು ಬಹು ಕಷ್ಟ ಹರಿದಾಡುವಂಥ।।ಪ।। ಕಾಶಿಗೆ ಹೋಗಲಿಬಹುದು ದೇಶ ತಿರುಗಲಿಬಹುದು। ಆಸೆ ಸುಟ್ಟಂತೆ ಇರಬಹುದು ಹರಿದಾಡುವಂಥ।।1।। ಜಪವ ಮಾಡಲಿಬಹುದು ತಪವ ಮಾಡಲಿಬಹುದು। ಉಪವಾಸ ವ್ರತದಲ್ಲಿರಬಹುದು ಹರಿದಾಡುವಂಥ।।2।। ಸ್ನಾನ ಮಾಡಲಿಬಹುದು ಮೌನ ಮಾಡಲಿಬಹುದು। ಧ್ಯಾನದಿ ಪುರಂದರವಿಠಲನ ಚರಣದಲಿ ಹರಿದಾಡುವಂಥ।।3।।

**ಮರೆಯಬೇಡ ಮನವೆ** **ರಾಗ: ಕನ್ನಡ, ರೂಪಕತಾಳ**

ಮರೆಯಬೇಡ ಮನವೆ ನೀನು ಹರಿಯ ಸ್ಮರಣೆಯಾ।।ಪ।। ಯಾಗ ಯಜ್ಞ ಮಾಡಲೇಕೆ ಯೋಗಿ ಯತಿಯು ಆಗಲೇಕೆ। ನಾಗಶಯನ ನಾರದವಂದ್ಯನ ಕೂಗಿ ಭಜನೆ ಮಾಡೊ ಬೇಗ।।1।। ಸತಿಯು ಸುತರು ಹಿತರು ಎಂದು ಮತಿಯಗೆಟ್ಟು ಕೆಡಲಿಬೇಡ। ಗತಿಯು ತಪ್ಪಿ ಹೋಗುವಾಗ ಸತಿಯು ಸುತರು ಬಾಹೊರೇನೊ।।2।। ಹರಿಯ ಸ್ಮರಣೆ ಮಾತ್ರದಿಂದ ಘೋರ ದುರಿತವೆಲ್ಲ ನಾಶ। ಪರಮಪುರುಷ ಪುರಂದರವಿಠಲ ಪದವಿ ಕೊಡುವ ಪವನನಯ್ಯ।।3।।

**ಮನವ ಶೋಧಿಸ ಬೇಕು** **ರಾಗ: ಹಿಂದೋಳ**

ಮನವ ಶೋಧಿಸ ಬೇಕು ನಿತ್ಯ। ದನದನಮಾಡುವ ಪಾಪಪುಣ್ಯದವೆಚ್ಚ।।ಪ।। ಕರ್ಮ ಅಧರ್ಮಗಳ ವಿಂಗಡಿಸಿ ಅ। ಧರ್ಮದ ನರಗಳ ಬೇರು ಕತ್ತರಿಸಿ। ನಿರ್ಮಲಾ ಚಾರದಿ ಚರಿಸಿಪರ। ಬ್ರೊಮ್ಮ ಮೂರುತಿ ಪದಕಮಲವ ಭಜಿಸಿ।।1।। ತನುವ ಖಂಡಿಸಿ ಒಮ್ಮೆ ಮಾಣೋ ನಿನ್ನ। ಮನವ ದಂಡಿಸಿ ಪರಮಾತ್ಮನಕಾಣೋ। ಕೊನೆಗೆ ನಿನ್ನೊಳಗೆ ನೀ ಚಾರೋ ಮುಕ್ತಿ। ನಿನಗೆ ದೂರವಿಲ್ಲವೊ ಒಂದೇ ಗೇಣು।।2।। ಆತನವರಿಗೇ ಕೇಡಿಲ್ಲ। ಪಾತಕ ಪತಿತ ಸಂಗವು ಮಾಡನಲ್ಲ। ನೀತಿವಂತರು ಕೇಳಿರೆಲ್ಲಾ ನಮ। ಗಾತನೆ ಗತಿಯು ಪುರಂಧರ ವಿಠಲ।।3।।

**ಯಾವಾಗಲೂ ಚಿಂತೆ ಜೀವಕ್ಕೆ** **ರಾಗ: ಕಾನಡ, ಆದಿತಾಳ**

ಯಾವಾಗಲೂ ಚಿಂತೆ ಜೀವಕ್ಕೆ ಈ ಜೀವ ಒಂದು ಪರಿ ಆಗೋ ತನಕ।।ಪ।। ಹೆಂಡತಿಯಿಲ್ಲದ ಚಿಂತೆ ಹೆಂಡತಿಯಿದ್ದರು ಚಿಂತೆ ಚಂಡಿ ಕುರೂಪಿಯಾದರು ಚಿಂತೆ। ತೊಂಡನಾಗಿಪೊತ್ತು ತಿರುಗುವ ಚಿಂತೆ ಭೂಮಂಡಲದೊಳಗೆಲ್ಲ ಚಿಂತೆ ಕಾಣಣ್ಣ।।1।। ಓಲೆಗಿಲ್ಲದ ಚಿಂತೆ ಓಲೆಗಾದರೂ ಚಿಂತೆ ಮೇಲೆ ಸಂಬಳ ಬಾರದ ಚಿಂತೆ। ಸಾಲಕೊಡೋ ಚಿಂತೆ ಸಾಲತೆಗೆಯೊ ಚಿಂತೆ ಮೂರ್ಲೋಕ ದೊಳಗೆಲ್ಲ ಚಿಂತೆ ಕಾಣಣ್ಣ।।2।। ಮನೆಯಿಲ್ಲದ ಚಿಂತೆ ಮನೆಯಾದರೆ ಚಿಂತೆ ಮನೆವಾರ್ತೆ ನಡೆಯದ ಚಿಂತೆ। ಮನಸಿಜನಯ್ಯ ಶ್ರೀ ಪುರಂದರವಿಠಲನ ನೆನೆದರೆ ಚಿಂತೆ ನಿಶ್ಚಿಂತೆ ಕಾಣಣ್ಣ।।3।।

**ಸುಮಿರನ ಕರಲೇ ಮೇರೆ ಮನಾ (ಹಿಂದಿ)** **ರಾಗ: ಯಮನ್ ಕಲ್ಯಾಣಿ**

ಸುಮಿರನ ಕರಲೇ ಮೇರೆ ಮನಾ। ತೇರಿ ಬೀತೀ ಜಾತೀ ಉಮರ ಹರಿನಾಮ ಬಿನಾ।।ಪ।। ಕೂಪ ನೀರ ಬಿನ ಧೇನು।। ಕ್ಷೀರ ಬಿನಾ। ಧರತೀ ಮೇಹಬಿನಾ। ಜೈಸೇ ತರುವರ ಫಲ ಬಿನ ಹೀನಾ। ತೈಸೇ ಪ್ರಾಣೀ ಹರಿನಾಮಬಿನಾ।।1।। ದೇಹ ನೈನ ಬಿನಾ ರೈನ ಚಂದ ಬಿನಾ ಮಂದಿರ ದೀಪ ಬಿನಾ। ಜೈಸೇ ಪಂಡಿತ ವೇದ ಬಿಹೀನಾ। ತೈಸೇ ಪ್ರಾಣೀ ಹರಿನಾಮ ಬಿನಾ।।2।। ಕಾಮ ಕ್ರೋಧ ಮದ ಲೋಭ ನಿಹಾರೋ ಛಾಡದೇ ಅಬ ಸಂತಜನಾ। ಕಹೇ ನಾನಕಶಾ ಸುನ ಭಗವಂತ। ಯಾ ಜಗಮೇ ನಹೀ ಕೋಯೀ ಅಪನಾ।।3।।

**ಹರಿ ಹರಿ ಎನಲಿಕ್ಕೆ ಹೊತ್ತಿಲ್ಲ** **ರಾಗ: ಬೇಹಾಗ್, ಏಕತಾಳ**

ಹರಿ ಹರಿ ಎನಲಿಕ್ಕೆ ಹೊತ್ತಿಲ್ಲ ಈ ನರಜನ್ಮ ವ್ಯರ್ಥವಾಗಿ ಹೋಗುವುದಲ್ಲ।।ಪ।। ಹರಿ ಜಾಗರಣೆಯಲ್ಲಿ ಪಾರಣೆ ಚಿಂತೆ। ನಿರತಯಾತ್ರೆಯಲಿ ಶಾಕದ ಚಿಂತೆ।।1।। ಕರ್ಮದಿ ಒಂದು ಚಿಂತೆ ಧರ್ಮದಿ ಒಂದು ಚಿಂತೆ। ಪೆರ್ಮನ ಮಾಡಲು ಬಲು

ಚಿಂತೆ॥2॥ ವರ್ಮ ವೈರದಿ ಚಿಂತೆ ಈರ್ಮನಸ್ಸಾಗೆ ಚಿಂತೆ। ದುರ್ಮದದಿ ನಡೆಯೆ ಪ್ರಾಣದ ಚಿಂತೆ॥3॥ ಗಂಗೆಯೊಳ್ಮುಳುಗುವಾಗ ಚೆಂಬುಮೇಲಿನ ಚಿಂತೆ। ಸಂಗಡದವರು ಪೋಗುವರೆಂಬ ಚಿಂತೆ॥4॥ ಪನ್ನಗಶಯನ ಶ್ರೀ ಪುರಂದರವಿಠಲನ್ನ। ಹಿಂಗದೆ ಭಜಿಸಲು ಸತತ ನಿಶ್ಚಿಂತೆ॥5॥

## ಭಕ್ತಿಗೀತೆ

### ಅಲೈಪಾಯುದೇ ಕಣ್ಣಾ (ತಮಿಳು) ರಾಗ: ಕಾನಡ, ಆದಿತಾಳ

ಅಲೈಪಾಯುದೇ ಕಣ್ಣಾ ಎನ್ ಮನಂಮಿಗ ಅಲೈಪಾಯುದೇ। ಉನ್ ಆನಂದ ಮೋಹನ ವೇಣುಗಾನಮದಿಲ್॥ಪ॥ ನಿಲೈಪೆಯರಾದು ಶಿಲೈಪೋಲವೇ ನಿನ್ರು। ನೇರಮಾವದರಿಯಾ ಮಲೇ ಮಿಗ ವಿನೋದಮಾನ ಮುರಳೀಧರಾ ಎನ್‌ಮನಂ॥ಅ.ಪ॥ ತೆಳಿಂದ ನಿಲವು ಪಟ್ಟ ಪಗಲ್ ಪೋಲ್ ಎರಿಯುದೇ। ದಿಕ್ಕೈ ನೋಕ್ಕಿ ಎನ್ನಿರು ಪುರುವಂ ನೆರಿಯುದೆ। ಕನಿಂದ ಉನ್ ವೇಣು ಗಾನಂ ಕಾಟ್ರಿಲ್ ವರುಗುದೆ ಕಣ್ಣಾ। ಕಣ್‌ಗಳ್ ಸೊರುಗಿ ಒರು ವಿಧಮಾಯ್ ವರುಗುದೆ॥1॥ ಕಸಿತ್ತ ಮನತ್ತಿಲ್ ಒರುತ್ತಿ ಪದತ್ತೈ ಎನಕ್ಕು ಅಳಿತ್ತು ಮಗಿಳ್‌ತವಾ ಒರುತನಿತ್ತ ವನತ್ತಿಲ್ ಅಣೈತ್ತು ಎನಕ್ಕು ಉಣರ್ಚಿ ಕುಡುತ್ತು ಮುಗ್ಗಿಳ್‌ತವಾ। ಕನೈ ಕಡಲ್ ಅಲೈಯಿನಿಲ್ ಕದಿರವನ್ ಒಳಿ ಎನ ಇನೈಯರು ಕಳಿಲನ ಮಗ್ಗಿಳ್‌ತವಾ ಕದರಿ ಮನಂ ಉರುಗಿ ನಾನ್ ಅಳೈಕ್ಕವೊ ಇದರ ಮಾದರುಡು ನೀ ಸುಹಿಕ್ಕವೊ। ಇದು ತಗುಮೊ ಇದು ಮೊರೆಯೊ ಇದು ಧರ್ಮಂ ತಾನೊ। ಕುಳಲ್ ಊದಿಡುಂ ಪೊಳುದು ಆಗಿಡುಂ ಶಿಲೈಗಳ್ ಪೋಲವೇ ಮನ ವೇದನೈ ಮಿಗವೊಡು॥2॥

### ಅಲೆದಾಡಿದೆ ಕೃಷ್ಣಾ (ಮೇಲಿನ ಕೃತಿಯ ಕನ್ನಡಭಾವಾನುವಾದ) ರಾಗ: ಕಾನಡ

ಅಲೆದಾಡಿದೆ ಕೃಷ್ಣಾ ಮನವಿದು ಅಲೆದಾಡಿದೆ। ನಿನ್ನ ಆನಂದ ಮೋಹನ ವೇಣುಗಾನಪ್ರಿಯ॥ಪ॥ ಗಾನವಿಲೋಲ ಹೇಗೋಪಾಲ ಮಾರಜನಕ ಮಧುಸೂದನಾ। ನವನೀತ ಚೋರ ಮುರಳೀಧರ ಈ ಮನ॥ಅ.ಪ.॥ ಬೆಳದಿಂಗಳು ಸುಡು ಬಿಸಿಲಾಗಿದೆ ಹಗಲೋ ಇರುಳೋ ತಿಳಿಯದಾಗಿದೆ। ಕಿವಿಯಲಿ ವೇಣುಗಾನ ಮಾರ್ದ್ವನಿಸುತಿದೆ। ಕಂಗಳಲೀ ನಿನ್ನ ರೂಪವೆ ತುಂಬಿದೆ॥1॥ ಮನವಿದು ಮರುಗಿದೆ ನಯನವು ಕೊರಗಿದೆ। ಹೃದಯವು ಮಿಡಿದಿದೆ ಕೇಶವ ಬಾ ಮನದ ಬೇಗೆಯನು ತಣಿಸಿ ಬಾ ಪ್ರೇಮ ವೀಣೆಯನು ನುಡಿಸೇ ಬಾ ಸದಯನೆ ಬಾ ಸರಸವ ತಾ ನೀಲಮೇಘ ಶ್ಯಾಮಸುಂದರನೇ ಬಾ ಕೊಳಲೂದುತ ಮೊರೆಯಾಲಿಸು ನವನೀತ ಚೋರ ಮುರಳೀಧರ ಈಮನ ಅಲೆದಾಡಿದೆ ಕೃಷ್ಣಾ॥2॥

### ಒಡವೆ ಹೋಯಿತು ಮನಸ್ಸು ದೃಢವು ರಾಗ: ನಾದನಾಮಕ್ರಿಯ

ಒಡವೆ ಹೋಯಿತು ಮನಸ್ಸು ದೃಢವು ಆಯಿತು। ಹಿಡಿದರೆ ಓಡುವ ಕಳ್ಳ ಒಡವೆ ಕದ್ದುಕೊಂಡು ಪೋದ॥ಪ॥ ಆರು ಜೋಡಿನ ಓಲೆಯಿತ್ತು ಮೂರು ಮುತ್ತಿನ ಮೂಗುತಿಯಿತ್ತು। ಮೇಲೆ ಇಪ್ಪತ್ನಾಲ್ಕು ಸರವು ಬಂದಿತ್ತು। ಈರೈದು ತಾಳಿಗಳಿತ್ತು। ಗುರುತಾದ ಕೆಂಪು ಎಂಟಿತ್ತು। ದಾರಿನೋಡಿಕೊಂಡು ಇದ್ದು ಭಯನೆಂಬೊ ಕಳ್ಳ ಕದ್ದ॥1॥ ಇಪ್ಪತ್ತೆರಡು ಸಾವಿರ ಸೂತ್ರದ ಹಸ್ತ ಕಟ್ಟು ಒಂದಿತ್ತು। ಹಸಿರು ನೀಲ ಸರಿಪ್ರಮಾಣದ ಪದಕ ಒಂದಿತ್ತು। ಒಪ್ಪ ಇಟ್ಟ ಹಸ್ತ ಕಡಗ ಆಶಾಪಾಶಾ ಎರಡಿತ್ತು। ಪಾತಕವ ಸಂಧಿಸಿದ ಧರ್ಮವೆಂಬೊ ಕಳ್ಳ ಕದ್ದ॥2॥ ಇಪ್ಪತ್ನಾಲ್ಕು ಸಾವಿರ ಸೂತ್ರದ ಗಟ್ಟಿ ತೂಕದ ನಗವು ಇತ್ತು। ಕಷ್ಟ ಸುಖ ಕರ್ಮಗಳೆಂಬೊ ತಂತುಗಳಿತ್ತು। ಅಷ್ಟು ಇಷ್ಟು ಚಿಲ್ಲರೆ ಒಡವೆ ಪೆಟ್ಟಿಗ್ಯಾಕಿ ತುಂಬಿತ್ತು। ದೃಷ್ಟಿ ನೋಡಿಕೊಂಡು ಇದ್ದು ನೇತ್ರನೆಂಬೊ ಕಳ್ಳ ಕದ್ದ॥3॥ ಎಲ್ಲಾ ಒಡವೇನಿಟ್ಟುಕೊಂಡು ಫುಲ್ಲಾಳಾಗಿ ಮೆರೆಯುತ್ತಿದ್ದೆ। ಚೆಲುವನೊಬ್ಬ ಪುರುಷನು ಕಂಡು ತಾಳಲಾರದೆ। ಬಲ್ಲಿದವಳು ಯಾಕೆ ಎಂದು ಇವಳ ಬಗೆಯು ತಿಳಿಯಿತೆಂದು। ಗುಲ್ಲು ಬಾರದಂತೆ ಹೇಳಿ ಮನೆಯ ಬಿಟ್ಟು ಹೊರಡಿಸಿದ॥4॥ ಇಂಥಾ ಒಡವೆ ಹೋಲುತೆಂದು ಚೋದ್ಯ ಪಟ್ಟು

ನೋಡುತಿರಲು। ಅಂಕವಾದಿ ಆದಿ ಕೇಶವ ಹರಿಯು ತಾ ಬಂದು। ಮಂತ್ರವನ್ನೇ ಹೇಳಿ ಜ್ಞಾನ ಮಾರ್ಗವನ್ನೇ ತೋರಿಸಿ। ಸಂತೋಷವಾಗಿ ಇರು ಎಂದು ಚಿಂತೆ ಬಿಡಿಸಿ ಸಲಹಿದನು॥5॥

## ಗುರು ಭಜನ ಕರಲೇ ಮನವಾ (ಹಿಂದಿ)

ಗುರು ಭಜನ ಕರಲೇ ಮನವಾ ಗುರು ಮುಖಸೇ ಸುನಲೇ ಮನವಾ। ಸಾಧನಕ ಕರಲೇ। ಅಪನೇ ಹಿತಕಾ। ಸಾರ್ಥಕ ಅಬ। ಅಪನೇ ಜನಮಕಾ॥ಪ॥ ಯಹ ಸಂಸಾರ। ಸಪನವತ ಜಾನೋ। ಭೂಲನ ಜಾ ಅಪನಾ। ನಿಜಹಿತಕಾ। ಕೋಟಿ ಜತನ ಕರೋರೆ ಮನವಾ। ನಾಮಿಲೆ ಫಿರಯಹ। ಜನಮ ಮಾನವಕಾ॥1॥ ಶ್ರವಣ ಮನನ ನಿಧಿ। ಧ್ಯಾಸ ಕರತತುಮ। ತನ್ಮಯ ಹೋಜಾ। ಹೋರೆ ಮನವಾ। ಚರನ ಕಮಲ ಪರ। ಶಿರ ನಮಾವೋ। ಬಾರ ಬಾರ ಬಲಿ। ಜಾವೋರೆ ಮನವಾ॥2॥

## ದಿನ2 ಮನವೇ ನೀ

ರಾಗ: ಕಾಮಾಚ್, ಆದಿತಾಳ

ದಿನ ದಿನ ಮನವೇ ನೀ ನೆನೆ ಮೂರ್ತಿಯ॥ಪ॥ ಧನಂಜಯನಿಗೆ ಕೃಷ್ಣ ಅನಘನಾದ ಕಥೆಯ॥ಅ.ಪ.॥ ಹರಟೆ ಹಾಳುಗಳ್ಯಾಕೆ ಗೊರಕೆ ನಿದ್ರೆಯು ಬೇಕೆ। ಕಿರೀಟಿಸಖನ ನಾಮ ಅತಿರುಚಿ ತಿಳಿಕೋ ಸಖಾ॥1॥ ದುರ್ಜನ ಸಂಘವ ಬಿಡು ಸಜ್ಜನರನು ಕೂಡು। ಅರ್ಜುನ ಸಾರಥಿ ಗುಣವ ಘರ್ಜಿಸಿ ಭಜನೆ ಮಾಡೋ॥2॥ ಹರಿದಿನ ವ್ರತವನ್ನು ಹರಿ ತುಳಸಿಪತಿ ಎನ್ನು। ಹರಿ ಅಮ್ಮಾಳು ಪ್ರಿಯನೇ ಧರೆಗೆ ಆಧಾರವೆನ್ನು॥3॥

## ದುಡುಕಬೇಡ ಮನವೆ ನೀನು

ರಾಗ: ಕನ್ನಡ

ದುಡುಕಬೇಡ ಮನವೆ ನೀನು। ದುಡುಕಿನಿಂದ ಕೆಡಲುಬೇಡ॥ಪ॥ ದುಡುಕಿನಿಂದ ಬುದ್ಧಿನಾಶ। ದುಡುಕಿನಿಂದ ಕ್ಲೇಶಪಾಶ॥ಇವುಗಳಿಂದ ನೀನು ನಾಶ। ಸುಮತಿಯಿಂದ ಸುಖವು ಸಾಧ್ಯ॥1॥ ನಿನ್ನ ಬುದ್ಧಿ ಸ್ಥಿಮಿತವಿರಲಿ। ನಿನ್ನ ಮನದಿ ತಾಳ್ಮೆ ಇರಲಿ। ಹರಿಯನಾಮ ಜಿಹ್ವೆಲಿರಲಿ। ಪೊರೆವನೆಂಬ ನಂಬಿಕೆ ಇರಲಿ॥2॥ ನಿನ್ನ ಚಿತ್ತ ಶಾಂತವಿರಲಿ। ಶಾಂತಬುದ್ಧಿ ಮನದಿ ಇರಲಿ। ಹರಿಯೆ ಎಲ್ಲಾ ಭಾವವಿರಲಿ। ಚೈತನ್ಯದಾಸ ತೃಪ್ತನಿರಲಿ॥3॥

## ಪೂಜೆ ಮಾಡೋ ಎಲೆ ಮನವೇ

ರಾಗ: ಅಭೇರಿ

ಪೂಜೆ ಮಾಡೋ ಎಲೆ ಮನವೇ ರಾಮರ ಪೂಜೆ ಮಾಡೋ ॥ಪ॥ ವಿವೇಕಿ ಎಂಬೋ ನದಿಗೆ ಪೋಗಿ। ಜ್ಞಾನವೆಂಬೋ ಮುಳುಗನೆ ಮುಳುಗಿ। ಜ್ಞಾನಾಂತಕನ ಪೂಜೆಯ ಮಾಡಿ। ಸದಾನಂದ ಪಡೆಯಲೋ ಮನವೇ ॥1॥ ಲೋಕಾಂತರದ ಕಲ್ಲಿನಿಂದ। ಜನ್ಮಾಂತರದ ಕೊಳೆಯ ತೊಳೆದು। ನಿರ್ಮಲವಾದ ಮಡಿಯನುಟ್ಟು। ನಿತ್ಯಾನಂದ ಪಡೆಯೆಲೊ ಮನವೇ ॥2॥ ನಿಷ್ಕಲ್ಮಷದ ನಾಮವನಿಟ್ಟು। ವಿಶ್ವಾಸವೆಂಬ ಹೂವನೆ ಮುಡಿಸಿ। ವೈರಾಗ್ಯವೆಂಬ ಧೂಪವ ಹಾಕಿ। ನಿತ್ಯಾನಂದ ಪಡೆಯಲೋ ಮನವೆ॥3॥ ಅಹಂಕಾರವೆಂಬೋ ಕಾಯಿನೇ ಒಡೆದು। ಅಭಿಮಾನವೆಂಬೋ ಹಣ್ಣ ಸುಲಿದು। ಆಸೆ ಎಂಬ ಎಲೆಯನ್ನು ಹರಿದು। ತನುಮನವೆಂಬ ಎಡೆಯನೇ ನೀಡಿ॥4॥ ಶಾಂತಿ ಎಂಬ ಪತಿಯೊಡಗೂಡಿ। ಸಂತೋಷ ವೆಂಬ ಮಗನ ಪಡೆದು। ಮುಕ್ತಿಯೆಂಬ ಮನೆಯನು ಸೇರಿ। ಸೀತಾರಾಮರ ಪೂಜೆಮಾಡಿ॥4॥ ಸರ್ವೇಶ್ವರನ ಪೂಜೆ ಮಾಡಿ। ಸರ್ವದುಃಖವ ಕಳೆದುಕೊಳಲು। ಸರ್ವೇಶ್ವರನ ಪೂಜೆಯ ಮಾಡಿ। ಸದಾನಂದವ ಪಡೆಯೆಲೋ ಮನವೆ॥5॥

## ಮೋಹದ ಮಡುವಲ್ಲಿ ಮುಳುಗುತ

ರಾಗ: ರೇವತಿ

ಮೋಹದ ಮಡುವಲ್ಲಿ ಮುಳುಗುತ ಕಾಲವ। ವ್ಯರ್ಥವಾಗಿ ಕಳೆಯಲು ಬೇಡ ಮನವೆ॥ಪ॥ ನರಜನ್ಮ ದೊರಕುವುದು ದುರ್ಲಭ ಧರೆಯೊಳು। ಹರಿನಾಮ ರಸವನ್ನು ಸವಿಮನವೆ॥ಅ.ಪ॥ ಪರರಿಗೆ ಕೇಡ ನೀ ಬಯಸದಿರು ಮನವೆ। ಪರರ ಮಾತಿಗೆ ನೀ ಪೋಗದಿರು ಮನವೆ॥ ಪರಮಾತ್ಮ ಶ್ರೀಹರಿಯ ನಾಮ ರಸದೊಳು ಸದಾಕಾಲದಲ್ಲಿಯು ಮುಳುಗುತಲಿರು

ಮನವೇ॥1॥ ಹೊಗಳಿಕೆ ಕೇಳುತ ಹಿಗ್ಗದಿರು ಮನವೇ।ತೆಗಳಿಗೆ ಕೇಳುತ ಕುಗ್ಗದಿರು ಮನವೇ। ಹೊಗಳಿಕೆ ತೆಗಳಿಕೆಗೆ ಜಗ್ಗದಿಹ ಶಾರದೆಯ ಸವಿ ನುಡಿಗಳಿಗೆ ನೀ ಬಗ್ಗು ಮನವೇ॥2॥

**ರಾಮ3 ಪಾಡು ನೀ ಮನಮೆ (ತಮಿಳು) ರಾಗ: ಹಂಸನಾದ**

ರಾಮ ರಾಮ ರಾಮ ಪಾಡು ನೀ ಮನಮೆ। ಪಾವಂ ಎಲ್ಲಾಂ ತೀರ್ಕುಂ ಪರಮಾನಂದಮಡೆಯುಂ ॥ಪ॥ ರಾಮನಾಮಂ ಪಾಡಿ ಆನಂದಮಡೆಯುಂ ಆಂಜನೇಯನ್ನೈ ಪೋಲ್ ಅನಶ್ವರ ನಾಕುಂ॥ಅ.ಪ॥ ಪುರುಷೋತ್ತಮ ನಾಯ್ ಧರ್ಮರಕ್ಷಕನಾಯ್। ಭಕ್ತಪಾಲಕನಾಯ್ ಶ್ರೀರಾಮಚಂದ್ರನಾಯ್। ಭುವಿಮೇಲವತ್ತರಿತ್ತ ಹರಿಯಿನ್ ತಿರುನಾಮಂ ರಾಮನಾಮ ಸ್ಮರಣಂ ಪರಮಾನಂದಪ್ರದಂ॥ಚರಣ॥

## ಭಜನೆ

**ಗಾತೇ ಚಲೋ ಮನ್ ಮೆ (ಹಿಂದಿ) ರಾಗ: ಸಿಂಧುಭೈರವಿ**

ಗಾತೇ ಚಲೋ ಮನ್ ಮೆ ಹರೆ ಕೃಷ್ಣ ರಾಮಾ। ಹರೇ ಕೃಷ್ಣ ರಾಮ ಸದಾ ಸುಖ ಧಾಮ ॥ಗಾತೇ॥ ತನ್ ಮನ್ ಮೆ ರಾಮ, ನಸ್ ನಸ್ ಮೆ ರಾಮ। ಜಹಾಂ ದೇಖೋ ವಹಾಂ ಸೀತಾರಾಮ॥ಗಾತೇ॥ ರಘುಪತಿ ರಾಘವ ರಾಜಾರಾಮ ಪತಿತ ಪಾವನ ಸೀತಾರಾಮ ॥ಗಾತೇ॥2ಬಾರಿ॥

**ಮನ್ ಏಕಬಾರ್ ಹರಿ ಬೋಲ್ (ಹಿಂದಿ) ರಾಗ: ಯಮನ್**

ಮನ್ ಏಕ್ ಬಾರ್ ಹರಿ ಬೋಲ್। ಹರಿ ಹರಿ ಹರಿ ಬೋಲೋ। ಮನ್ ಹರಿ ಹರಿ ಬೋಲೋ, ಭವಸಿಂಧು ಪಾರ್ ಕರ್‌ಲೋ। ಬ್ರಹ್ಮಾನಂದ ರೂಪ ಹರಿ। ಪತಿತ ಪಾವನ ಹರಿ। ಏಕ್ ಬಾರ್ ಹರಿ ಬೋಲ್॥1॥ ಹರಿ ಪಿತ ಹರಿ ಮಾತಾ। ಹರಿ ಗುರು ಜ್ಞಾನ ದಾತಾ। ಚಿದಾನಂದ ರೂಪ ಹರಿ ಪತಿತ ಪಾವನ ಹರಿ। ಏಕ್ ಬಾರ್ ಹರಿ ಬೋಲ್॥2॥

**ಮನ್ ಮಾನೆನಾ ಜಬ್ ಉತಾರೂಂ (ಹಿಂದಿ) ರಾಗ: ಕಾನಡ**

ಮನ್ ಮಾನೆನಾ ಜಬ್ ಉತಾರೂಂ ಪ್ರಭೂಜೀ॥ಪ॥ ವೇದ ಪುರಾಣನ ಸಬ್ ಹೀ ದೇಖೇ ಕೈಸೆ ಉತರುಂ ಪಾರ್ ಪ್ರಭೂಜಿ॥1॥ ನದಿಯಾಂ ಗಹರಿ ನಾವ್ ಪುರಾನೀ। ಲಾಗತ್ ಅಂತರ್ ಪಾರ್ ಪ್ರಭೂಜೀ॥2॥ ಮೀರಾ ಕೆ ಪ್ರಭು ಗಿರಿಧರ್ ನಾಗರ್ ಚರಣನ್ ಕೆ ಆಧಾರ್ ಪ್ರಭೂಜಿ॥3॥

## ಕೀರ್ತನೆ

**ಅನುರಾಗಮು ಲೇನಿ ಮನಸುನ ರಾಗ : ಸರಸ್ವತಿ, ರೂಪಕತಾಳ**

ಅನುರಾಗಮು ಲೇನಿ ಮನಸುನ ಸುಜ್ಞಾನಮು ರಾದು ॥ಪ॥ ಘನುಲೈನ ಯಂತರ ಜ್ಞಾನಮು ಲೆರುಗನಿ॥ಅ.ಪ.॥ ವಗ ವಗಗಾ ಭುಜಿಯಿಂಚು ವಾರಿಕಿ ದೃಪ್ತಿಯೌರೀತಿ ಸಗುಣ ಧ್ಯಾನಮುಪೈನಿ ಸೌಖ್ಯಮು ತ್ಯಾಗರಾಜನುತ ॥ಚರಣ॥

**ಚಕ್ಕನಿರಾಜ ಮಾರ್ಗಮುಲುಂಡಗ ರಾಗ: ಖರಹರಪ್ರಿಯ, ಆದಿತಾಳ**

ಚಕ್ಕನಿರಾಜ ಮಾರ್ಗಮುಲುಂಡಗ ಸಂದುಲದೂರಗನೇಲ ಓ ಮನಸ॥ಪ॥ ಚಕ್ಕನಿ ಪಾಲು ಮೀಗಡಯುಂಡಗ ಚೀಯನು ಗಂಗಾ ಸಾಗರ ಮೇಲ॥ಅ.ಪ॥ ಕಂಟಿಕಿ ಸುಂದರತರಮಗು ರೂಪಮೇ ಮುಕ್ಕಂಟಿ ನೋಟ ಚಲಗೆ ನಾಮಮೇ ತ್ಯಾಗರಾಜಿಂಟನೇ ನೆಲಕೊನ್ನದಿ ದೈವಮೇ ಯಿಟುವಂಟಿ ಶ್ರೀ ಸಾಕೇತರಾಮುನಿ ಭಕ್ತಿಯನು॥ಚರಣ॥

**ನಾದಲೋಲುಡೈ ಬ್ರಹ್ಮಾನಂದಮಂದವೇ ರಾಗ: ಕಲ್ಯಾಣವಸಂತ, ರೂಪಕತಾಳ**

ನಾದಲೋಲುಡೈ ಬ್ರಹ್ಮಾನಂದಮಂದವೇ ಮನಸ॥ಪ॥ ಸ್ವಾದು ಫಲಪ್ರದ ಸಪ್ತ-ಸ್ವರ ರಾಗ ನಿಚಯ ಸಹಿತ॥ಅ.ಪ॥

ಹರಿಹರಾತ್ಮ ಭೂಸುರಪತಿ ಶರಜನ್ಮ ಗಣೇಶಾದಿ ವರಮೌನುಲು ಪಾಸಿಂಚಿನ ಧರ ತ್ಯಾಗರಾಜ ವಿನುತ।।ಚರಣ।।

**ನಾದ ಸುಧಾರಸಂಬಿಲನು** **ರಾಗ: ಆರಭಿ, ರೂಪಕತಾಳ**

ನಾದ ಸುಧಾರಸಂಬಿಲನು ನರಾಕೃತಿಯಾಮೆರಾ ಮನಸಾ।।ಪ।। ವೇದ ಪುರಾಗಮ ಶಾಸ್ತ್ರಮುಕಾಧಾರಮೌ।।ಅ.ಪ।। ಸ್ವರಮುಲಾರುನ್ನಾ ಕಟಿಘುಂಟಲು ವರರಾಗಮು ಕೋದಂಡಮು ದುರ ನಯದೇಶ್ಯಮು ತ್ರಿಗುಣಮು ನಿರತಗತಿ ಶರಮುರಾ ಸರಸ ಸಂಗತಿ ಸಂದರ್ಭಮು ಗಲಗಿರಮುಲುರಾ ಧರ ಭಜನ ಭಾಗ್ಯಮುರಾ ತ್ಯಾಗರಾಜು ಸೇವಿಂಚು।।ಚರಣ।।

**ಭಜನ ಸೇಯವೇ ಓ ಮನಸಾ** **ರಾಗ: ಕೇದಾರ, ರೂಪಕತಾಳ**

ಭಜನ ಸೇಯವೇ ಓ ಮನಸಾ ಪ್ರಣತಾರ್ಥಿಹರುನಿ।।ಪ।। ಅಜಪುರಂದರಾದುಲಕು ಆದಿಗವೆಲಯು ಮೂರ್ತಿನಿ।।ಅ.ಪ।। ಕಪಟ ನಾಟಕ ಸೂತ್ರಮುನ ಕಟ್ಟುಬಡಿ ಕಷ್ಟಮುಜೆಂದಗ ಜಪತಪಮುಲ ಸಾಧನಚೇ ಚಂಚಲಮು ದೀರ್ಚಿಸದಾ।।1।। ಅಂಬರಕೇಶ ದಿಗಂಬರ ಕರುಣಾಕರುನಿ ಅಂಬಿಕಾರಮಣುನಿ ಪಾದಾಂಬುಜಮುನ ಮದಿಬೂನಿ ।।2।। ಉಮಾದಾಸು ಕುಲಧನಮ್ಮೈ ಊರ್ಜಿತಂಬುಗಾವೆಲಸಿನ ಕುಮಾರ ಗಜಮುಖುನಿಗನ್ನ ಕುಂದರದನುನಿ ಗುರಿಂಚಿ।।3।। ಚಿಟ್ಟೆಸ್ವರ: ।।ಪ̇ಾಸಾ। ಸನಿಸಮಗರಿ ಸರಿ ।। ಸಾ೯ । ೯೯ ಸನಿಸರಿಸನಿ ।। ಸಮಗಾ। ಮಪನಿಪ ಸ̇ನಿಸ̇ರಿ̇।।ಸಾ೯ನಿ। ಪಮ ಪಮ̇ಗರಿ ।। ಸಮ̇ಗಪ । ೯ಮ ಗಮ̇ಪನಿಸ̇ನಿ ।।ಸ̇ಗ̇ರಿ̈ಮ̇।ಗ̇ರಿ̇।। ಸರಿ̇ ಸ̇ನಿಪನಿ ।। ರಿ̇ಸ̇ಾ ಸ̇ । ನಿಪ ಪಮಗಮಪನಿ ।। ಸ̇ಾ೯ನೀ ಪಮ ಪಮ ಗರಿಸನಿ ।।

**ಮನಸಾಯಟುಲೋರ್ತುನೇ ನಾ** **ರಾಗ: ಮಲಯಮಾರುತ, ರೂಪಕತಾಳ**

ಮನಸಾಯಟುಲೋರ್ತುನೇ ನಾ ಮನವಿ ಚೇಕೋನವೇ ಓ।।ಪ।। ದಿನಕರಕುಲ ಭೂಷಣುನಿ ದೀನುಡನೈ ಭಜನ ಜೇಸಿ। ದಿನಮು ಗಡುಪು ಮನಿನ ನೀವುವಿನವದೇಲ ಗುಣವಿಹೀನ।।ಅ.ಪ।। ಕಲಿಲೋ ರಾಜಸ ತಾಮಸಗುಣಮುಲು ಗಲವಾರಿ ಚೆಲಿಮಿ। ಗಲಸಿ ಮೆಲಸಿ ತಿರುಗುಚು ಮರಿಕಾಲಮು ಗಡಪಕ ಯೇ ಸುಲಭಮುಗಾ ಕಡತೇರನುಸೂಚನಲನುದೆಲಿಯ ಜೇಯು। ಇಲನು ತ್ಯಾಗರಾಜು ಮಾಟವಿನವದೇಲ ಗುಣವಿಹೀನ।।ಚರಣ।।

**ಮನಸು ನಿಲ್ಪ ಶಕ್ತಿ ಲೇಕ** **ರಾಗ: ಆಭೋಗಿ, ಆದಿತಾಳ**

ಮನಸು ನಿಲ್ಪ ಶಕ್ತಿ ಲೇಕ ಬೋಯಿನ ಮಧುರ ಘಂಟ ವಿರುಲ ಪೂಜಯೇಮಿ ಜೇಸುನು।।ಪ।। ಘನ ದುರ್ಮದುಡೈ ತಾಮುನಿಗಿನ। ಕಾವೇರಿ ಮಂದಾಕಿನಿಯೆಟು ಬ್ರೋಚುನು।।ಅ.ಪ।। ಸೋಮಿದಮ್ಮ ಸೊಗಸು ಗಾಂಡ್ರ ಗೋರಿನ। ಸೋಮಯಾಜಿ ಸ್ವರ್ಗಾರ್ವುಡೌನೋ। ಕಾಮ ಕ್ರೋಧುಡು ದಪಮೊನರ್ಚಿನ ಗಾಚಿ ರಕ್ಷಿಂಚುನೆ ತ್ಯಾಗರಾಜನುತ।।ಚರಣ।।

**ಮನಸುಲೋನಿ ಮರ್ಮಮು** **ರಾಗ: ಹಿಂದೋಳ, ದೇಶಾದಿತಾಳ**

ಮನಸುಲೋನಿ ಮರ್ಮಮು ದೆಲುಸುಕೋ ಮಾನರಕ್ಷಕ ಮರಕತಾಂಗ ನಾ।।ಪ।। ಇನಕುಲಾಪ್ತ ನೀವೇಗಾನಿ ವೇರೆವರು ಲೇರಯಾ ಆನಂದಹೃದಯ।।ಅ.ಪ।। ಮುನುಪು ಪ್ರೇಮ ಗಲ ದೊರವೈ ಸದಾ ಚನುವು ನೇಲಿನದಿ ಗೊಪ್ಪಗಾದಯಾ ಕನಿಕರಂಬುತೋ ನೀ ವೇಳನಾ ಕರಮು ಬಟ್ಟು ತ್ಯಾಗರಾಜ ವಿನುತ।।ಚರಣ।।

**ಮನವಿನಾಲ ಕಿಂಚರಾದಟೇ** **ರಾಗ: ನಳಿನಕಾಂತಿ, ಆದಿತಾಳ**

ಮನವಿನಾಲ ಕಿಂಚರಾದಟೇ ಮರ್ಮ ಮೆಲ್ಲ ದೆಲ್ಪೆದನೆ ಮನಸಾ।।ಪ।। ಘನುಡೈನ ಶ್ರೀರಾಮಚಂದ್ರುನಿ ಕರುಣಾಂತರಂಗಮು ದೆಲ್ಪಿನ ನಾ।।ಅ.ಪ.।। ಕರ್ಮಕಾಂಡ ಮತಾಕೃಷ್ಟು ಲೈ ಭವ ಗಹನ ಚಾರುಲೈ ಗಾಸಿ ಜೆಂದಗ ಗನಿ ಮಾನವತಾರುಡೈ ಕನುಪಿಂಚಿನಾಡೇ ನಡತ ತ್ಯಾಗರಾಜು।।ಮ...।।ಚರಣ।।

**ಮನಸು ಸ್ವಾಧೀನ ಮೈನ** **ರಾಗ: ಶಂಕರಭರಣ, ರೂಪಕತಾಳ**

ಮನಸು ಸ್ವಾಧೀನ ಮೈನ ಯಾ ಘನುನಿಕಿ ಮರಿ ಮಂತ್ರ ತಂತ್ರಮು ಲೇಲ॥ಪ॥ ತನುವು ತಾನು ಗಾದನಿ ಯೆಂಚುವಾರಿಕಿ ತಪಸು ಚೇಯನೇಲ ದಶರಥ ಬಾಲ॥ಅ.ಪ॥ ಅನ್ನಿ ನೀವನುಚು ಯೆಂಚಿನವಾನಿಕಿ ಯಾಶ್ರಮ ಭೇದಮು ಲೇಲ ಕನ್ನುಗಟ್ಟು ಮಾಯಲನಿ ಯೆಂಚುವಾನಿಕಿ ಕಾಂತಲ ಭ್ರಮಲೇಲ ದಶರಥ ಬಾಲ॥ಮ...॥ ಆ ಜನ್ಮಮು ದುರ್ವಿಷಯ ರಹಿತುನಿಕಿ... ಗತಾಗತ ಮಿಕಯೇಲರಾಜ ರಾಜೇಶ ನಿರಂಜನ ನಿರುಪಮ ರಾಜವದನ ತ್ಯಾಗರಾಜ ವಿನುತ॥ಮ...॥

**ಮರಕತವಲ್ಲಿಂ ಮನಸಾ** **ರಾಗ: ಕಾಂಭೋಜಿ, ಆದಿತಾಳ**

ಮರಕತವಲ್ಲಿಂ ಮನಸಾ ಸ್ಮರಾಮಿ ಮದನ ಜನಕಾದಿ ದೇವ ಪಾಲಿನೀಂ॥ಪ॥ ಹರಿ ಹೃದಯಾವೇಶಿನೀಂ ಮೋಹಿನೀಂ ಹರಿಹರ ಪುತ್ರ ಜನನೀಂ ನಳಿನೀಂ ಕ್ರೂರ ದೈತ್ಯಾದಿ ಬೃಂದಮರ್ದಿನೀಂ ಗುರುಗುಹಾದಿನುತ ವಹ್ನಿವಾಸಿನೀಂ ॥ಚರಣ॥

**ಮರವಾದಿರು ನೆಂಜಮೇ (ತಮಿಳು)** **ರಾಗ: ಆಂದೋಳಿಕ, ಆದಿತಾಳ**

ಮರವಾದಿರು ನೆಂಜಮೇ ಉನಕ್ಕಿದು ಇರೈವಾ ಮರುಂಧಾಮೇ॥ಪ॥ ನರುಮಾ ಮಲರ್ ಪೊಳಿಲ್ ಸೂಳ್ ತಿಲ್ಲೈ ಅಂಬಲ ನಾದರ್ ಕುಂಜಿತ ಚೆಂಬೊರ್‌ಪಾದಂ ಇಮ್ಮೈ ಪೊಳುದುಂ ॥ಅ.ಪ॥ ನಿಚ್ಚಯ ಮಾಗವೇ ಕೇಳಾಯ್ ಅಂಜೆಳುತ್ತೆನ್ರು ನಿರ್ಕುಮ್ ನಿಲೈಯೈ ಅರಿಂದು ಉಚ್ಚರಿತ್ತುಕೊಂಡು ವೈಚ್ಚ ವಳಿಯೈಶೆನ್ರು ಅಚ್ಚ ಮರವೇ ಕಂಡು ಮುಂಡ್ರಿ ಆನಂದ ನಡಂ ಇನ್ರೇಕ್ಕಂಡುಕೊಳ್‌ಎನ್ರು॥1॥ ದಿನವಾರ ಮಂದಿರ ಮೂಲತ್ತಾನಮೇ ಸೆನ್ರು ದರ್ಶನಂ ಸೆಯ್ ಶಿವಗಾಮಿ ಸನ್ನಿಧಿ ಕಂಡು ಅನವರತಮು ಸೆಂಪೊನ್ ಅಂಬಲತ್ತಾಡಿಯ ಅಮ್ಮೈಯಪ್ಪಾ ಪೋಟ್ರಾಲ್ ಸೆಮ್ಮೈಯಾಕ್ಕ ಕ್ಕಂಡು॥2॥

**ಮರಿ2 ನಿನ್ನೇ ಮೊರಲಿಡ ನೀ** **ರಾಗ: ಕಾಂಭೋಜಿ, ಆದಿತಾಳ**

ಮರಿ ಮರಿ ನಿನ್ನೇ ಮೊರಲಿಡ ನೀ ಮನಸುನ ದಯರಾದು॥ಪ॥ ಕರಿ ಮೊರವಿನಿ ಸರಗುನ ಚನ ನೀಕು ಗಾರಣ ಮೇಮಿ ಸರ್ವಾಂತರ್ಯಾಮಿ॥ಅ.ಪ.॥ ಕರುಣತೋ ಧ್ರುವುನಿ ಕೆದುಟ ನಿಲ್ಚಿನ -ಕಥ ವಿನ್ನಾನಯ್ಯ ಸುರರಿಪು ತನಯುನಿಕೈ ನರಮೃಗಮೌಸೂಚನ ಲೇಮಯ್ಯ ಮರಚಿಯುನ್ನ ವನಚರುನಿ ಬ್ರೋಚಿನಮಹಿಮ ದೆಲುಪವಯ್ಯ ಧರನು ವೆಲಯು ತ್ಯಾಗರಾಜ ಸನ್ನುತ ತರಮುಗಾ ದಿಕನೇ ವಿನನಯ್ಯ ...॥ಚರಣ॥

**ಮರುವಕವೇ ಓ ಮನಸ** **ರಾಗ: ಸಾಮ, ರೂಪಕತಾಳ**

ಮರುವಕವೇ ಓ ಮನಸ ಮಾರಾಮುನಿಮಷಮ್ಮೈನ ಮನಸಾ॥ಪ॥ ತರಣಿ ವಂಶ ತಿಲಕುಡೆ ಧರಣಿಜಾನಾಯಕುಡೆ॥ಅ.ಪ॥ ಪರಮಹಂಸ ಮುನಿಮಾನಸ ಪಂಕಜಾ ಪ್ರಭಾಕರುಡೆ ನರವರುಡೆ ನತಜನಾರ್ತಿಹರ ಬಿರುದಾಂಕಿತುಡೇ, ವರದ ವೆಂಕಟೇಶ್ವರುಡೇ ವಾಂಛಿತ ಫಲದಾಯಕುಡೇ ॥ಚರಣ॥

**ಮಾನಸ ಸಂಚರರೇ ಬ್ರಹ್ಮನಿ** **ರಾಗ: ಸಾಮ, ಆದಿತಾಳ**

ಮಾನಸ ಸಂಚರರೇ ಬ್ರಹ್ಮನಿ॥ಪ॥ ಮದಶಿಖಿಪಿಂಚ ಅಲಂಕೃತ ಚಿಕುರೇ। ಮಹದೀಯ ಕಪೋಲ ವಿಜಿತಮುಕುರೇ॥ಅ॥ ಶ್ರೀರಮಣೀಕುಚ ದುರ್ಗವಿಹಾರೇ ಸೇವಕಜನ ಮಂದಿರ ಮಂದಾರೇ ಪರಮಹಂಸ ಮುಖ ಚಂದ್ರಚಕೋರೇ ಪರಿಪೂರಿತ ಮುರಳೀಧವಧಾರೇ॥ಚ॥

**ರಘುವರ ನನ್ನು ಮರವತಗುನಾ** **ರಾಗ: ಕಾಮವರ್ಧಿನಿ, ಆದಿತಾಳ**

ರಘುವರ ನನ್ನು ಮರವತಗುನಾ॥ಪ॥ ನಗಧರಭಕ್ತ ಜನಾಘ ನಿವಾರಣ॥ಅ.ಪ॥ ಚೇಸಿನ ಪುಣ್ಯ ಚಯಮು ಬ್ರಹಣ್ಯ ಆಶನೊಸಂಗಿತಿ ಅನುಪಮ ಲಾವಣ್ಯ॥1॥ ಮನಸುನ ನೀಕೇ ಮರುಲುಕೊನ್ನಾನು ಸಜ್ಜನಹಿತ ತ್ಯಾಗರಾಜನುತ

ಶುಭಾಕರ॥2॥

**ರಾಗ ರಸಾಮೃತ (ಕೆಳಗಿನ ಕೀರ್ತನೆಯ ತಮಿಳು ಅನುವಾದ) ರಾಗ: ಆಂದೋಳಿಕ-ಆದಿತಾಳ**

ರಾಗ ರಸಾಮೃತ ಪಾನಮೇ ದಿನಮೇ ಸಂಗೀತಮೇ ಓ ಮನಸಾ॥ಪ॥ ಯಾಗಯೋಗಮೇ ತ್ಯಾಗ ಭೋಗಭಾಗ್ಯಂ ತರುಮೇ ॥ಅ.ಪ.॥ ಸದಾಶಿವಮಯಮೆನುಂ ನಾದ ಓಂಕಾರಸ್ವರಂ। ಧ್ಯಾನಮೇ ಜೀವನ್ಮುಕ್ತಿ ಸುಖಂ ಕಾಣುಮೇ ಮನಮೇ॥ಚರಣ॥

**ರಾಗಸುಧಾರಸ ಪಾನಮು ರಾಗ: ಆಂಧೋಳಿಕ, ದೇಶಾದಿತಾಳ**

ರಾಗಸುಧಾರಸ ಪಾನಮು ಜೇಸಿರಾಜಿಲ್ಲವೇ ಮನಸಾ॥ಪ॥ ಯಾಗ ಯೋಗ ತ್ಯಾಗ-ಭೋಗ ಫಲ ಮೊಸಂಗು॥ಅ.ಪ॥ ಸದಾಶಿವ ಮಯಮಗು ನಾದೋಂಕಾರಸ್ವರ ವಿದುಲು ಜೀವನ್ಮುಕ್ತುಲನಿ ತ್ಯಾಗರಾಜು ತೆಲಿಯು॥ರಾ....॥ಚರಣ॥

**ರಾಮ ನಾಮಮು ಜನ್ಮ ರಕ್ಷಕ ರಾಗ: ಅಠಾಣ, ಆದಿತಾಳ**

ರಾಮ ನಾಮಮು ಜನ್ಮ ರಕ್ಷಕ ಮಂತ್ರಂ ತಾಮಸಮು ಸೇಯಕ ಭಜಿಂಪವೆ ಮನಸಾ॥ಪ॥ ಸೋಮ ಸೂರ್ಯ ನೇತ್ರುಡೈನ ಶ್ರೀ ರಾಮಚಂದ್ರುನಿಕಿ ಸರಿಯವರುರಾ॥ಅ.ಪ॥ ಕಾಮಕೋಟಿ ರೂಪ ರಾಮಚಂದ್ರ ಕಾಮಿತ ಫಲದಾ ಸುಗುಣಾ ಸಾಂದ್ರ ಜ್ಞಾನ ಸ್ವರೂಪ ರಾಮಚಂದ್ರ ತ್ಯಾಗರಾಜಾರ್ಚಿತ ರಾಮಚಂದ್ರ॥ಚರಣ॥

**ವಾಡೇರಾ ದೈವಮು ಮನಸ ರಾಗ: ಪಂತುವರಾಳಿ, ಆದಿತಾಳ**

ವಾಡೇರಾ ದೈವಮು ಮನಸ॥ಪ॥ ಆಡಿನ ಮಾಟಲು ತಪ್ಪಡನುಚು ಆಚಂದ್ರಾರ್ಕಮುಗ ಗೀರ್ತಿ ಗಲಿಗಿನ॥ಅ.ಪ॥ ದಂಡಿ ರಕ್ಕಸುಲ ಮದಮಣಚನ ಯಾಖಂಡಲಾದಿ ಸುರಕೋಟ್ಲಕು ಭೂಮಂಡಲ ಸುಜನುಲ ಬಾಲಿಂಪನು ಕೋದಂಡ ಪಾಣಿ ರೂಪಮುತೋ ವೆಲಸಿನ॥1॥ ದಾರಿ ದೆಲಿಯ ಲೇನಿ ಯಜ್ಞುಲಕು ಭವ ನೀರಧಿ ದಾಟಿ ಮೋಕ್ಷ ಮಂದುಟಕು ನೀರಜಾರಿಧರುಡು ಪದೇಶಿಂಚೆಡಿ ತಾರಕ ನಾಮಮುತೋನು ವೆಲಸಿನ॥2॥ ಧಾತೃ ವಿನುತುಡೈನ ತ್ಯಾಗರಾಜುನಿ ಚೇತ ಪೂಜಲಂದಿ ಬಾಗುಗ ಪ್ರದ್ಯೋತನಾ ಸ್ವಯಮುನನು ಜನಿಂಚಿ ಸೀತಾಪತಿಯನಿ ಪೇರುಗಲಿಗಿನ॥3॥

**ವಿಡಜಾಲದುರಾ ನಾ ಮನಸು ರಾಗ: ಜನರಂಜನಿ, ಆದಿತಾಳ**

ವಿಡಜಾಲದುರಾ ನಾ ಮನಸು ವಿನರಾ॥ಪ॥ ಅಡಿಯಾಸಲಚೇದಗಿಲಿನೇ ನಾರ್ತಿ ಬಡಿನ ಪದಂಬುಲನು ॥ಅ.ಪ॥ ತನುವೇಪನುಲಕು ಜನಿನ ಮರಿ ಕನರಾನಿದಿ ಕನುಗೊನಿನ ನಿನುಗಾಭಾವಿಂಚಿ ಸಂತಸಿಲ್ಲಿತಿ ಶ್ರೀ ತ್ಯಾಗರಾಜನುತ॥1॥

**ಶೋಬಿಲ್ಲು ಸಪ್ತಸ್ವರ ಸುಂದರುಲ ರಾಗ: ಜಗನ್ಮೋಹಿನಿ, ರೂಪಕತಾಳ**

ಶೋಬಿಲ್ಲು ಸಪ್ತಸ್ವರ ಸುಂದರುಲ ಭಜಿಂಪವೇ ಮನಸ॥ಪ॥ ನಾಭಿ ಹೃತ್ಕಂಠ ರಸನನಾಸಾದುಲಯಂದು॥ಅ.ಪ॥ ಧರಋಕ್ಸಾ ಮಾದುಲಲೋ-ವರ ಗಾಯತ್ರೀ ಹೃದಯಮುನ ಸುರ ಭೂಸುರ ಮಾನಸಮುನ-ಶುಭ ತ್ಯಾಗರಾಜುನಿಯೆಡ॥ಚರಣ॥ **ಚಿಟ್ಟೆಸ್ವರ** ॥ ಸನಿ ಪಮಗರಿ ಸನಿಸಾ ॥ ಗಾ ಮಗಮಪ ನಿನಿಪಮ ॥ ಗಪಮಗರಿಸ ನಿಸ ಸಗಮ ಗ ॥ ಮಪ ಮಪನಿ ಪನಿಸ ನಿಪನಿಸ ॥ ರಿಸಾನಿಸನಿ ಪಮಗಮಪನಿ ॥ ಸಗಮಾಮಾ ಗರಿಸನಿಪಮ ॥ ಗಗಮಾಮಾ ಗಮಪಮಪನಿ॥

## ಇತರೆ

**ಅಳಿಯಾಸೆಗಳ ಸುಳಿಗೆ (ಭಾವಗೀತೆ) ರಾಗ : ಹಿಂದೋಳ**

ಅಳಿಯಾಸೆಗಳ ಸುಳಿಗೆ ಸಿಲುಕಿದೆಲೆ ಮನವೇ। ನೆಲೆಯಿರದೆ ತೊಳಲುವುದು ಮನುಜ ಜೀವನವೇ?। ನೆನೆ ಬೇಕು

ಕೊನೆಬೇಕು ನರನ ಬಾಳುವೆಗೆ। ದಿನದ ಗೈಮೆಯ ಹೂವು ಫಲಿಸಿ ಬರುವುದಕೆ॥1॥ ಕೆಸರೊಳಿದ್ದರು ಮೇಲೆ ಬಾಂದಳವ ನೋಡಿ। ಮಿಸುಪ ರವಿಕಿರಣಗಳ ಸಿರಿಗೆ ಮೆರೆದಾಡಿ। ಮಸಗುವಂಬುಜದಂತೆ ಧ್ಯೇಯದಾಳ್ವಿಸಕೆ। ಬಸಮಾಗು ಬಂದ ಮನುಜತೆಯ ಸಾರ್ಥತೆಗೆ॥2॥ ಗಾಳಿ ಬಂದೆಡೆ ತಿರುಗುವಾ ಹೇಡಿತನವು। ದಾಳಿ ಬಂದೊಡನೆ ಶರಣೆಂಬ ಹೆಣ್ತನವು ಬೇಡ। ಹಿಡಿದೊಳ್ದಾರಿಯೊಳು ಕೊನೆಯವರೆಗೆ। ದೂಡು ಬಾಳ್ವೆಯನು ಪೌರುಷದ ಹೊನ ಲೊಳಗೆ॥3॥ ಒಂದು ಬಾಣಕೆ ಗುರಿಯು ಹಲವಿರುವುದುಂಟೆ?। ಒಂದುದೇಹದೊಳಾತ್ಮ ವೆರಡಿರುವು ದುಂಟೆ?। ಒಂದು ಜೀವನಕೇಕೆ ಹಲವು ಸಾಧ್ಯಗಳು? ಒಂದೆ ಹೆಗ್ಗುರಿಗೆ ಹೋರಾಡು ಹಗಲಿರುಳು॥4॥ ನರನೊಳಗೆ ನಾರಾಯಣನ ರೂಪು ಕಂಡು। ತಿರೆಯೊಳಗೆ ಸುರಪುರದ ಮೈಸಿರಿಯನುಂಡು। ಪರಹಿತಕೆ ಬಳಲುತಿರಲದುವೆ ಜೀವನವು। ಪೆರತೇನನೆಸಗಿದರು ನಮಗೆ ಲಾಂಛನವು॥5॥

**ಎಲ್ಲಿ ಜಾರಿತೋ ಮನವು (ಭಾವಗೀತೆ)** **ರಾಗ: ಸೌಖ್ಯದಾಯಿನಿ**

ಎಲ್ಲಿ ಜಾರಿತೋ ಮನವು ಎಲ್ಲೆ ಮೀರಿತೋ। ಎಲ್ಲಿ ಅಲೆಯುತಿಹುದೋ ಏಕೋ ನಿಲ್ಲದಾಯಿತೋ॥ಪ॥ ದೂರದೊಂದು ತೀರದಿಂದ ತೇಲಿ ಪಾರಿಜಾತ ಗಂಧ। ದಾಟಿ ಬಂತು ಬೇಲಿ ಸಾಲ ಮೀಟಿ ಹಳೆಯ ಮಧುರ ನೋವ॥1॥ ಬಾನಿನಲ್ಲಿ ಒಂಟಿ ತಾರೆ ಸೋನೆ ಸುರಿವ ಇರುಳ ಮೋರೆ। ಕತ್ತಲಲ್ಲಿ ಕುಳಿತು ಒಳಗೆ ಬಿಕ್ಕುತಿಹಳು ಯಾರೋ ನೀರೆ॥2॥ ಹಿಂದೆ ಯಾವ ಜನ್ಮದಲ್ಲೊ ಮಿಂದ ಪ್ರೇಮ ಜಲದ ಕಂಪು। ಬಂದು ಚೀರುವೆದೆಯ ನೋವ ಹೇಳಲಾರೆ ತಾಳಲಾರೆ॥

**ಏನಿದೇನಿದೇ ಮನಸೇ (ಭಾವಗೀತೆ)** **ರಾಗ: ಕಲ್ಯಾಣಿ**

ಏನಿದೇನಿದೇ ಮನಸೇ ನಿನಗಿಲ್ಲ ಸೊಗಸೇ ಹೆಹೆಹೆ। ಏನಿದೂ ನಿನ್ನ ಮಾಯಾ ಎನಿತದೋ ನಿನ್ನ ಕಾಯ॥ ಅಡಿ ಇಟ್ಟು ಗೆದ್ದಾಗ ನಲಿವೆ ಮೈ ಮರೆತಂತೆ। ಮತ್ತೆ ನೀ ಸೋತಾಗ ಮುದುಡಿ ಕೊರಗುವೆ ಏಕೇ ಹೆ ಹೆ ಹೆ॥ ನನ್ನೊಳಗೆ ನೀನೋ ನಿನ್ನೊಳಗೆ ನಾನೋ। ಅರಿತವರು ಯಾರುಂಟು ಅರಿಯದವರ್ಯ್ಯಾರುಂಟು॥ ನೀನಂತೆ ನಡೆದಾಗ ಮುಗಿಯಿತಿನ್ನೆಂದಾಗ। ಮತ್ತೆ ನೀ ಬಿಡಲೊಲ್ಲೆ ಬೆಂಬಿಡದೆ ನನ್ನ ಕಾಡೆ ಹೆ ಹೆ ಹೆ॥ ಮಧು ತುಂಬಿದಾ ಬಿಂದಿಗೆಯೂ ನೀನು। ವಿಷ ತುಂಬಿದಾ ಪಾತ್ರೆಯೂ ನೀನು॥ ಮೈಮರೆಸುವಾ ಪ್ರೇಮಮಯಿಯೂ ನೀನು। ಬಹು ಮುಖಗಳಿರುವ ಅತಿಕ್ರೂರಿಯೂ ನೀನು। ನೀನು ಕಾಡುವುದೇನು ನಾನು ಬೇಡುವುದೇನು॥ ಎಲ್ಲ ನೀ ತಿಳಿದೇಕೆ ಸೋಲುಗೆಲುವಿನ ಆಟ॥ ನೀ ಸ್ವತಂತ್ರನೋ ಪರತಂತ್ರನೋ ನಾ ಅರಿಯೆ ನೀ ನಡೆಸಿದಂತೆ ನಡೆ ನಡೆದು ಸಾಕಾದೆ ಹೆ ಹೆ ಹೆ॥

**ಕಾದು ಕೆಂಪಾಗಿರುವ (ಭಾವಗೀತೆ)** **ರಾಗ: ಹಂಸಾನಂದಿ**

ಕಾದು ಕೆಂಪಾಗಿರುವ ಹೆಂಚು ಈ ಮನಸು। ಹಿಮ ಘಮದ ಧೂಪರಜ ನೀನಿತ್ತ ಕನಸು॥ ಬಿದ್ದಂತೆ ಹುಡಿ ಧೂಪ ಮನಸಿನಲಿ ಚಿನ್ನ। ಏಳುವುವು ಗೀತೆಗಳು ಪರಿಮಳಿಸಿ ನನ್ನ॥1॥ ಒಲವು ಮೂಡುವುದಿಲ್ಲಿ ಕಲೆಯಾಗಿ ಅರಳಿ। ಒಂದು ಜೀವದ ಭಾವ ಎದೆ ಎದೆಗೂ ತೆರಳಿ॥ ನುಡಿಯುವುವು ಎಂದೆಂದು ಹಕ್ಕಿ ಹಾಡಾಗಿ। ಪ್ರೀತಿಸುವ ಜನಮನವೆ ತಕ್ಕ ಬೀಡಾಗಿ॥2॥

**ತನುವೆಂಬ ಜೀವಕ್ಕೆ (ಸಂದೇಶ)** **ರಾಗ: ಸಾರಂಗ**

ತನುವೆಂಬ ಜೀವಕ್ಕೆ ಮನವೆಂಬುದೆ ಅಕ್ಷಿ ಹರಿಎಂಬ ಬೆಳಕು ಕಾಣಲು ತೋರುವುದು ಜಗವೆಲ್ಲ ಪರಿಪರಿಯ ಬಣ್ಣದಿಂ ಜೀವ ಹೋಗುವ ಮುನ್ನ ಅಕ್ಷಿ ಕುಕ್ಷಿಯಾಗುವ ಮುನ್ನ ಮಾಯೆ ಎಂಬ ತೆರೆ ಅಡ್ಡಬರುವ ಮುನ್ನ ನೋಡಿಕೊ ನಿನ್ನ ದಾರಿಯನು ಸೇರಿಕೊ ಹರಿ ಎಂಬ ಬೆಳಕನ್ನು॥

**ನಗುನಗುತ ಹಗುರವಾಗು (ಭಾವಗೀತೆ) ರಾಗ: ಸೌಖ್ಯದಾಯಿನಿ**

ನಗುನಗುತ ಹಗುರವಾಗು ಓ ಮನವೆ।। ವಿಷಗಳಿಗೆ ಬಂದೀತು ರಸಗಳಿಗೆ ಸಂದೀತು ನಗುನಗುತ ಹಗುರವಾಗು ಓ ಮನವೇ। ಬೆಳಕು ನೆಳಲುಗಳಂತೆ, ಸುಖದುಃಖ ಬಂದೀತು। ನಗು ನಗುತ ಹಗುರವಾಗು ಓ ಮನವೇ।।1।। ಕಾಲ ಚಕ್ರವನೊತ್ತಿ ಮುಂದಮುಂದಕೆ ನೂಕಿ ಹಗಲಿರುಳು ಬರುವ ವೋಲು। ಓ ಮನವೇ। ಜೀವನದ ನೌಕೆಯನು ಮುಂದಮುಂದಕೆ ನೂಕಿ ಬಂದಾವು ಗೆಲುವು, ಸೋಲು ಓ ಮನವೇ।।2।।

**ಮನದ ಬಾನಂಚಿನಲಿ (ಭಾವಗೀತೆ) ರಾಗ: ಭೌಳಿ**

ಮನದ ಬಾನಂಚಿನಲಿ ಕಲೆಯ ರವಿಯುದಯಿಸಿಹನೋ। ಹೃದಯ ಪಕ್ಷಿಗಳ ಗಾನ ಮೊದಲಾಗಿದೆ।। ಏಳು ಓ ನಟರಾಜ ಏಳು ಸಾಹಸ ತೇಜ। ಏಳು ಮುನಿಜನ ಪೂಜ್ಯ ಏಳ್ಳೈಯ್ಯ ಬೆಳಗಾಯಿತು।। ಈ ಬೆಳಕು ಮುಂಬೆಳಕು ಮನುಜ ಹೃದಯದಿ ಬೆಳಕ। ಹರಿಸಿಹ ಚೆಂಬೆಳಕು ಸೊಬಗ ನೀ ರಸಿಕ ಮಾನ್ಯರೆಲ್ಲರಿಗೆ। ಮೆಲ್ಲ ಮೆಲ್ಲನೆ ಬೀಸುಗಾಳಿ।। ತರುಲತಾದಿಗಳು ಕೊನರಿ ಚಿಗುರಿ ಸುಮಗಳ ತಳೆಯುತೆ ಪರಿಮಳ ಬೀರಿ। ಸರ್ವರ ಎದೆಯಲಿ ಸತ್ಯವ ತೋರಿ ಸರಳ ಜೀವನದ ಮಂತ್ರವ ಸಾರಿ। ಕೂಕೂ ಕೋಗಿಲೆಗಾನದಿ ಮೈ ಮರೆಯುತಿದೆ ಸರಳ ಜೀವನದ ಮಂತ್ರವ ಸಾರಿ ಸೊಬಗಿನ ವನವೇ ಸತ್ಯದ ನೆಲೆಯು।।

**ಮನಶುದ್ಧಿ ಇಲ್ಲದವರಿಗೆ (ಉಗಾಭೋಗ) ರಾಗ: ಷಣ್ಮುಖಪ್ರಿಯ**

ಮನಶುದ್ಧಿ ಇಲ್ಲದವರಿಗೆ ಮಂತ್ರದ ಫಲವೇನು ತನುಶುದ್ಧಿಯಿಲ್ಲದವಗೆ ತೀರ್ಥದ ಫಲವೇನು ಮಿಂದಲ್ಲಿ ಫಲವೇನು ಮೀನು ಮೊಸಳೆಯಂತೆ ಮಿಂದಲ್ಲಿ ಫಲವೇನು ಶ್ರೀ ಶೈಲದ ಕಾಗೆಯಂತೆ ಹೊರಗೆ ಮಿಂದು ಒಳಗೆ ಮೀಯದವರ ಕಂಡು ಬೆರಗಾಗಿ ನಗುತ್ತಿದ್ದ ಪುರಂದರವಿಠಲ।।

**ಲಘುವಾಗೆಲೆ ಮನ ರಾಗ: ಕಾನಡ-ಏಕತಾಳ**

ಲಘುವಾಗೆಲೆ ಮನ ಗೆಲುವಾಗೆಲೆ ಮನ। ಹಾರು ನನ್ನ ಬಿಟ್ಟು ಹಾರಿ ಹರಿಯ ಮುಟ್ಟು।।ಪ।। ನನಗಂಟಲು ನೀನಾಗುವೆ ಕಲ್ಮಶ ನನ್ನ ತೊರೆಯೆ ನೀ ನಿರ್ಮಲ ನಿಷ್ಕಳ ಹರಿಯೊ। ನನ್ನ ಬಿಟ್ಟು ಮುಂಬರಿದು ಹರಿಯ ಮುಟ್ಟು।।1।। ನೀಲದಾಗಸದ ಹರಹೊಳು ಹಾರುತ ಅಂಚೆಯಂತೆ ಮುಗಿಲಂಚನು ಸೇರುತ। ಕ್ಷೀರಾಬ್ಧಿಶಾಯಿ ಶ್ಯಾಮಸುಂದರನ ಉಸಿರೊಳಾಡು ನೀನವನುಸಿರಾಗುತ।।2।। ಬೆಳಕಿಗೊಲಿದು ಬಿರಿದಲರಿನೆಲರು ಬರೆ ಪೋಗು ಸಂಗಡೆಲೆ ನೀ ಮನವೆ। ಮುಗ್ಧರುಲಿವ ನಗೆ ಮಾತುಗಳಾಲಿಸಿ ನಂದಗೋಕುಲವ ನೆನೆಮನವೆ।।3।। ಗರಿಮುದುರಿಸುವ ಒಳಲಂಟನು ಕರಗಿಸೆ ಶ್ಯಾಮನ ಮೈಬಣ್ಣದಿ। ನೆನೆಯೊ ಮಿಂದೇಳುತಲಾ ಪುಣ್ಯ ಕಾಳಿಮದಿ ಚಿಲುಗಂಗಳ ತೇಜದಿ ಬೆರೆಯೋ।।4।।

# ನಾಮಸ್ಮರಣೆಸ್ತುತಿ

## ದೇವರನಾಮ

**ಏನೇನು ದಾನವ ಮಾಡಲಿ ರಾಗ: ಶುಭಪಂತುವರಾಳಿ, ಛಾಪುತಾಳ**

ಏನೇನು ದಾನವ ಮಾಡಲಿ, ಹರಿ ಧ್ಯಾನಕ್ಕೆ ಸಮವಾದ ದಾನಂಗಳುಂಟೆ।।ಪ।। ಶತಕೋಟಿ ಕನ್ಯಾಪ್ರದಾನವ ಮಾಡಲಿ। ಅತಿಶಯ ಉದಕ್ಕೆ ದಾನವ ಮಾಡಲಿ। ಮತಿಶುದ್ಧನಾಗಿ ಭೂದಾನವ ಮಾಡಲಿ। ಕೃತಿರಮಣನ ಧ್ಯಾನಕ್ಕೆ ಸರಿಯುಂಟೆ।।1।। ದಿನಕೊಂದು ಸಾವಿರ ಗೋದಾನಮಾಡಲಿ। ಅನುದಿನ ಅನ್ನದಾನವ ಮಾಡಲಿ। ಘನವಾಗಿ ಸುವರ್ಣ